**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 888 |
| ಮಾನ್ಯ ಸದಸ್ಯರ ಹೆಸರು | ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18-12-2018 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಪರವಾನಿಗೆಯನ್ನು ಪಡೆದು ನಡೆಯುತ್ತಿರುವ ಎಕ್ಸ್-ರೇ ಕೇಂದ್ರಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಅಧಿನಿಯಮ (ಕೆ.ಪಿ.ಎಂ.ಎ.) ಅಡಿ ನೋಂದಣಿಯಾದ ಒಟ್ಟು ಎಕ್ಸ್-ರೇ ಕೇಂದ್ರಗಳ ಸಂಖ್ಯೆ 3419. |
| ಆ) | ಸರ್ಕಾರದ ನಿಯಮಾವಳಿಯನ್ನು ಮೀರಿ ನಡೆಸುತ್ತಿರುವ ಎಕ್ಸ್-ರೇ ಮಾಫಿಯಾದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬಂದಿರುವುದಿಲ್ಲ. |
| ಇ) | ಖಾಸಗಿ ಎಕ್ಸ್-ರೇ ಕೇಂದ್ರಗಳಿಗೆ ಸರ್ಕಾರ ದರವನ್ನು ನಿಗದಿ ಮಾಡುವ ಅಧಿಕಾರ ಇದೆಯೇ; ಇದ್ದಲ್ಲಿ, ಸರ್ಕಾರದ ನಿಯಮದಂತೆ ದರ ನಿಗದಿ ಬಗ್ಗೆ ಫಲಕಗಳನ್ನು ಹಾಕಿ ದರವನ್ನು ಪಡೆಯುತ್ತಿದ್ದಾರೆಯೇ; ಇಲ್ಲದಿದ್ದಲ್ಲಿ, ಖಾಸಗಿ ಎಕ್ಸ್-ರೇ ಕೇಂದ್ರಗಳು ಯಾವ ಮಾನದಂಡದ ಮೇಲೆ ಬೆಲೆಯನ್ನು ನಿಗದಿ ಮಾಡುತ್ತವೆ? | ಖಾಸಗಿ ಎಕ್ಸ್-ರೇ ಕೇಂದ್ರಗಳಿಗೆ ಸರ್ಕಾರ ದರವನ್ನು ನಿಗದಿ ಮಾಡುವ ಅಧಿಕಾರ ಇರುವುದಿಲ್ಲ.<br><br>ಆಯಾ ಎಕ್ಸ್-ರೇ ಕೇಂದ್ರಗಳೇ ದರಗಳನ್ನು ನಿಗದಿ ಪಡಿಸಿ ಕೇಂದ್ರಗಳಲ್ಲಿ ದರಪಟ್ಟಿಯನ್ನು ಪ್ರದರ್ಶಿಸಿರುತ್ತಾರೆ |
| ಈ) | ಪೋಲಿಯೋ, ದಡರಾ, ರುಬೆಲ್ಲಾ ಖಾಯಿಲೆಗಳು ಮಕ್ಕಳಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಖಾಯಿಲೆಗಳನ್ನು ತಡೆಯಲು ಕೈಗೊಂಡಿರುವ ಕಾರ್ಯಕ್ರಮಗಳೇನು; ಈ ಖಾಯಿಲೆಗೆ ಸಂಬಂಧಿಸಿದ ಲಸಿಕೆಗಳನ್ನು ಕಾಲಕಾಲಕ್ಕೆ ತ್ವರಿತವಾಗಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | • 2007ರಲ್ಲಿ ಕರ್ನಾಟಕದಲ್ಲಿ ಕಟ್ಟಕಡೆಯ ಪೋಲಿಯೋ ಪ್ರಕರಣ ವರದಿಯಾಗಿದ್ದು, ಕಳೆದ 10 ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ಪೋಲಿಯೊ ಪ್ರಕರಣವು ಕಂಡುಬಂದಿರುವುದಿಲ್ಲ. ಭಾರತ ದೇಶವು ಪೋಲಿಯೊ ಮುಕ್ತ ರಾಷ್ಟ್ರ ಎಂಬ ಬಿರುದನ್ನು ವಿಶ್ವ ಆರೋಗ್ಯ ಸಂಸ್ಥೆಯಿಂದ 27ನೇ ಮಾರ್ಚ್ 2014ರಲ್ಲಿ ಪಡೆದಿದೆ.<br>• ದಡಾರ-ರುಬೆಲ್ಲಾ ಖಾಯಿಲೆಗಳು ಮಕ್ಕಳಲ್ಲಿ ಕಂಡುಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಮಕ್ಕಳಿಗೆ ಲಸಿಕೆ ಹಾಕಿರುವ ವಿವರ: (ಹೆಚ್‌ಎಂಐಎಸ್ ವರದಿ) |

| ವರ್ಷ | | ದಡಾರ-ರುಬೆಲ್ಲಾ 1ನೇ ವರಸೆ | ದಡಾರ-ರುಬೆಲ್ಲಾ 2ನೇ ವರಸೆ |
|---|---|---|---|
| 2017-18 | ಗುರಿ | 1101091 | |
| | ಸಾಧನೆ | 1009183 | 944329 |
| 2018-19 | ಗುರಿ | 700087 | |
| | ಸಾಧನೆ | 713421 | 669302 |

ದಡಾರ-ರುಬೆಲ್ಲಾ ಖಾಯಿಲೆಯ ವಿವರ: (ಹೆಚ್‌ಎಂಐಎಸ್

| | | |
|---|---|---|
| | | ವರದಿ)<br>• 2017–18 : 548<br>• 2018–19 : 401 ರಷ್ಟು ಪ್ರಕರಣಗಳು ವರದಿಯಾಗಿರುತ್ತದೆ.<br><br>ಈ ಖಾಯಿಲೆಗಳನ್ನು ತಡೆಗಟ್ಟಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br>• 1985ರಲ್ಲಿ ಪ್ರಾರಂಭವಾದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ದಡಾರ ಲಸಿಕೆಯನ್ನು ನೀಡಲು ಪ್ರಾರಂಭಿಸಲಾಯಿತು.<br>• 2017 ಫೆಬ್ರುವರಿ 19 ರಂದು ದಡಾರ ರುಬೆಲ್ಲಾ ಲಸಿಕೆಯನ್ನು ಪ್ರಾರಂಭಿಸಲಾಯಿಗಿದ್ದು, ದಡಾರ-ರುಬೆಲ್ಲಾ ಲಸಿಕೆಯನ್ನು ಎಲ್ಲಾ 9 ರಿಂದ 12 ತಿಂಗಳ ವಯಸ್ಸಿನ ಶಿಶುಗಳಿಗೆ ಮೊದಲನೇ ವರಸೆ ಮತ್ತು 16 ರಿಂದ 24 ತಿಂಗಳ ವಯಸ್ಸಿನ ಮಕ್ಕಳಿಗೆ ಎರಡನೇ ವರಸೆಯನ್ನು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ.<br>• ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಎಲ್ಲಾ ರೋಗನಿರೋಧಕ ಲಸಿಕೆಗಳನ್ನು ಭಾರತ ಸರ್ಕಾರವು ರಾಜ್ಯ ಮಟ್ಟಕ್ಕೆ ಕಾಲಕಾಲಕ್ಕೆ ಬೇಡಿಕೆಗನುಗುಣವಾಗಿ ಸರಬರಾಜು ಮಾಡುತ್ತಿದೆ. ರಾಜ್ಯ ಲಸಿಕಾ ಉಗ್ರಾಣದಿಂದ ವಿಭಾಗ ಮಟ್ಟದ ಲಸಿಕಾ ಉಗ್ರಾಣಗಳಿಗೆ, ವಿಭಾಗ ಲಸಿಕಾ ಉಗ್ರಾಣಗಳಿಂದ 31 ಜಿಲ್ಲಾ ಲಸಿಕಾ ಉಗ್ರಾಣಗಳಿಗೆ ಲಸಿಕೆ ಸರಬರಾಜಿಗಾಗಿಯೇ ಇರುವ ಲಸಿಕಾ ವಾಹನದಲ್ಲಿ ಸರಬರಾಜು ಮಾಡಲಾಗುತ್ತಿದೆ. ಇಲ್ಲಿಂದ ಎಲ್ಲಾ ಶೀತಲ ಸರಪಣಿ ಕೇಂದ್ರಕ್ಕೆ ಸರಬರಾಜು ಮಾಡಲಾಗುತ್ತಿದೆ.<br><br>ಜಿಲ್ಲಾ ಲಸಿಕಾ ಉಗ್ರಾಣದಿಂದ ಎಲ್ಲಾ ಆರೋಗ್ಯ ಕೇಂದ್ರಗಳಿಗೆ ಲಸಿಕೆಗಳನ್ನು ಸರಬರಾಜು ಮಾಡಲಾಗುತ್ತದೆ. ಇದನ್ನು ಪ್ರತಿ ಗುರುವಾರ ನಡೆಯುವ Out reach session ಗೆ ಲಸಿಕೆಗಳನ್ನು Vaccine Carrier ಮುಖಾಂತರ ಸಾಗಿಸಲಾಗುತ್ತದೆ. ಲಸಿಕೆ ಇರುವ ಸ್ಥಳದಿಂದ ಲಸಿಕಾ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ (ಸೆಶನ್ಸ್‌ಗೆ) ಲಸಿಕೆ ತಲುಪಿಸಲು ಒಬ್ಬ ವ್ಯಕ್ತಿಯನ್ನು ಗುರುತಿಸಿ ಅವರಿಗೆ Hard to reach area: Rs.200/- & other area Rs.90/- ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. |

ಸಂಖ್ಯೆ: ಆಕುಕ 888 ಚು.ರ. 2018

(ಶಿವಾನಂದ ಎಸ್. ಪಾಟೀಲ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು